# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,

ಬಿ.ಕಾಂ., ಎಲ್.ಎಲ್.ಬಿ.,

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,

ಹಿರಿಯೂರು, ಚಿತ್ರದುರ್ಗ ಜಿಲ್ಲೆ.

**ಅಸಲು ದಾವಾ ಸಂಖ್ಯೆ 19/2011**

ದಿನಾಂಕಃ 30 ನೇ ಆಗಸ್ಟ್ -2024

ವಾದಿಯರು ಃ

**1. ಶ್ರೀಮತಿ ದೇವಿರಮ್ಮ**
ಗಂಡ ಬಿಪಿ ಶಿವಣ್ಣ
ವಯಸ್ಸು ಸುಮಾರು 54 ವರ್ಷ

**2. ಶ್ರೀ ಸಣ್ಣ ಚಿಕ್ಕಣ್ಣ**
ತಂದೆ ಬಿಪಿ ಶಿವಣ್ಣ ವಯಸ್ಸು 29 ವರ್ಷ
ಇಬ್ಬರ ವಾಸ ವೀರೇನಹಳ್ಳಿ ಗ್ರಾಮ ಐಮಂಗಳ
ಹೋಬಳಿ ಹಿರಿಯೂರ್ ತಾಲೂಕು,

**3. ಶ್ರೀಮತಿ ಬಿ. ಚಂದ್ರ ಕಲಾ**
ಗಂಡ ಮುರುಳಿಧರ
ವಯಸ್ಸು ಸುಮಾರು 31 ವರ್ಷ
ವಾಸಃ ಜೆಎಚ್ ಪಟೇಲ್ ಬಡಾವಣೆ, ದಾವಣಗೆರೆ

(ವಾದಿಯರ ಪರವಾಗಿಃ ಶ್ರೀ ಎಸ್ ಜೆ. ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ

**1. ಬಿಪಿ ಶಿವಣ್ಣ ತಂದೆ ಚಿಕ್ಕಣ್ಣ**
(ಮೃತಪಟ್ಟಿರುತ್ತಾರೆ)

3 ನೇ ವಾದಿಯು ಇವರ ಕಾನೂನು ಬದ್ಧ ವಾರಸುದಾರರಾಗಿರುತ್ತಾರೆ.

**2. ದೊಡ್ಡಪಾತಪ್ಪ ತಂದೆ ಜಡಿಯಪ್ಪ**
(ಮೃತಪಟ್ಟಿರುತ್ತಾರೆ)
ಕಾನೂನು ಬದ್ಧ ವಾರಸುದಾರರು

2(ಎ) **ನಂದಮ್ಮ ಗಂಡ ಲೇಟ್ ದೊಡ್ಡಪಾತಪ್ಪ**
ವಯಸ್ಸು ಸುಮಾರು 55 ವರ್ಷ

**2(ಬಿ) ಸೋಮಶೇಖರ್ ತಂದೆ ಲೇಟ್ ದೊಡ್ಡಪಾತಪ್ಪ**
**ವಯಸ್ಸು ಸುಮಾರು 35 ವರ್ಷ**

ಪ್ರತಿವಾದಿ 2 ಎ ಮತ್ತು ಬಿ ರವರ ವಾಸಃ
ಬೀರೇನಹಳ್ಳಿ ಗ್ರಾಮ, ಐಮಂಗಳ ಹೋಬಳಿ,
ಹಿರಿಯೂರು ತಾಲೂಕು.

**3. ಚಂದ್ರಶೇಖರ್ ತಂದೆ** ಚಿಕ್ಕಣ್ಣ
(ಮೃತಪಟ್ಟಿರುತ್ತಾರೆ)
ಕಾನೂನು ಬದ್ಧ ವಾರಸುದಾರರು

**3(ಎ)ಮಂಜುಳಮ್ಮ ಗಂಡ ಲೇಟ್ ಚಂದ್ರಶೇಖರ್**
ವಯಸ್ಸು ಸುಮಾರು 40 **ವರ್ಷ**

**3 (ಬಿ) ವಿನಯ್ ತಂದೆ ಲೇಟ್ ಚಂದ್ರಶೇಖರ್**
**ವಯಸ್ಸು ಸುಮಾರು 22 ವರ್ಷ**

**3(ಸಿ) ಮಧು ತಂದೆ ಚಂದ್ರಶೇಖರ್**
**ವಯಸ್ಸು ಸುಮಾರು 14 ವರ್ಷ**

ಪ್ರತಿವಾದಿ 3 ಎ ರಿಂದ 3 ಸಿ ರವರ ವಾಸ
ಬೀರನಹಳ್ಳಿ ಗ್ರಾಮ ಐಮಂಗಳ ಹೋಬಳಿ
ಹಿರಿಯೂರು ತಾಲೂಕು.
ಪ್ರತಿವಾದಿ 3 ಸಿ ಅಲ್ಪವಹಿ ಆಗಿರುವುದರಿಂದ
ಅವರನ್ನು ನೈಸರ್ಗಿಕ ತಾಯಿಯವರಾದ ಪ್ರತಿವಾದಿ
ಶ್ರೀಮತಿ ಮಂಜುಳಮ್ಮ 3 ಎ ಇವರು
ಪ್ರತಿನಿಧಿಸುತ್ತಾರೆ

**4 ಕುಂಟಪ್ಪ ತಂದೆ ಶ್ರೀಧರಪ್ಪ**
(ಮೃತಪಟ್ಟಿರುತ್ತಾರೆ)
ಕಾನೂನು ಬದ್ಧ ವಾರಸುದಾರರು

**4(ಎ) ನಿಂಗಮ್ಮ ಗಂಡ ಲೇಟ್ ಕುಂಟಪ್ಪ**
**ವಯಸ್ಸು ಸುಮಾರು 62 ವರ್ಷ**

**4(ಬಿ) ಹಟ್ಟಿ ತಿಮ್ಮಣ್ಣ ತಂದೆ ಲೇಟ್ ಕುಂಟಪ್ಪ**
**ವಯಸ್ಸು ಸುಮಾರು 45 ವರ್ಷ**

**4(ಸಿ) ಗೋವಿಂದಪ್ಪ ತಂದೆ ಲೇಟ್ ಕುಂಟಪ್ಪ**
**ಸುಮಾರು 40 ವರ್ಷ**

ಪ್ರತಿವಾದಿ 4 ಎರಿಂದ 4 ಸಿ ರವರ ವಾಸ ಬ್ಯಾಡರಹಳ್ಳಿ
ಗ್ರಾಮ ಧರ್ಮಪುರ ಹೋಬಳಿ ಹಿರಿಯೂರ್
ತಾಲೂಕು,

**4(ಡಿ) ಕಮಲಮ್ಮ ಗಂಡ ತಿಮ್ಮರಾಜ**

**28 ವರ್ಷ**
ವಾಸ ಜೆಜೆಹಳ್ಳಿ ಗ್ರಾಮ ಮತ್ತು ಹೋಬಳಿ
ಹಿರಿಯೂರು ತಾಲೂಕು

**4(ಇ) ಲಕ್ಷ್ಮೀದೇವಿ ಗಂಡ ಶಿವಣ್ಣ**
**35 ವರ್ಷ**
ವಾಸಃ ಕರಿಮುದ್ದಯ್ಯನಹಟ್ಟಿ ಗ್ರಾಮ, ಎ ವಿ ಕೊಟ್ಟಿಗೆ ಹಿರಿಯೂರ್ ತಾಲೂಕು,

**4(ಎಫ್)ಯಶೋಧ ಗಂಡ ರಾಜಣ್ಣ**
ವಯಸ್ಸು ಸುಮಾರು 32 ವರ್ಷ
ಬೀರೆನಹಳ್ಳಿ ಗ್ರಾಮ ಐಮಂಗಳ ಹೋಬಳಿ
ಹಿರಿಯೂರು ತಾಲೂಕು

( **2** ಎ ಮತ್ತು ಬಿ , **3** ಎ ಯಿಂದ **3** ಸಿ ಹಾಗೂ **4** ಎ ಯಿಂದ **4** ಎಫ್ ಪ್ರತಿವಾದಿಯರ ಪರವಾಗಿ ಶ್ರೀಮತಿ ಹೆಚ್ ಬಿ ಆರ್ ವಕೀಲರು ಮತ್ತು **4** ನೇ ಪ್ರತಿವಾದಿಯ ಪರವಾಗಿಃ ಶ್ರೀ ಕೆ ಬಿ ವಕೀಲರು)

**<u>ಮಧ್ಯಂತರ ಅರ್ಜಿ ಸಂಖ್ಯೆ-27 ರ ಪಕ್ಷಗಾರರು</u>**

ಅರ್ಜಿದಾರರು /ವಾದಿಯರು ಃ ಶ್ರೀಮತಿ ದೇವಿರಮ್ಮ
ಮತ್ತು ಇತರರು

– ವಿರುದ್ಧ –

ಎದುರುದಾರರು / ಪ್ರತಿವಾದಿಯರು ಃ ಶ್ರೀ ಬಿ ಪಿ ಶಿವಣ್ಣ
ಮತ್ತು ಇತರರು

| | | |
|---|---|---|
| 1 | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ | ಸಿವಿಲ್ ಪ್ರಕ್ರಿಯ ಕ್ರಮಾದೇಶ 26 ನಿಯಮ 10 ಎ ರಡಿ ಮತ್ತು ಕಲಂ 45 ಭಾರತೀಯ ಸಾಕ್ಷಿ ಅಧಿ ನಿಯಮ 1872 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ |
| 2 | ಯಾವ ಪರಿಹಾರಕ್ಕಾಗಿ | ವಿವಾದಿತ ಸಹಿಗಳನ್ನು ವೈಜ್ಞಾನಿಕ ಪರಿಶೀಲನೆಗೆ ಕೈ ಬರಹ ತಜ್ಞರಿಗೆ ಕಳುಹಿಸಿ ಕೊಡಲು ಕೋರಿ |
| 3 | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ | 06.04.2024 |
| 4 | ಆರ್ಜಿಯ ವಿರುದ್ಧ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕ | 30.05.2024 |
| 5 | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ | 30.08.2024 |

**ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 10 ಎ ಸಹವರ್ತಿ ಕಲಂ 45 ರನ್ವಯ ಭಾರತೀಯ ಸಾಕ್ಷಾಧಾರಗಳ ಕಾಯ್ದೆ 1872 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆಃ 27 ರ ಮೇಲಿನ ಆದೇಶ.**

ಪ್ರತಿವಾದಿ 2 ರಿಂದ 4 ರವರು ಮಧ್ಯಂತರ ಅರ್ಜಿ 27 ನ್ನು ಸಿವಿಲ್ ಪ್ರಕ್ರಿಯ ಕ್ರಮಾದೇಶ 26 ನಿಯಮ 10 ಎ ರಡಿ ಮತ್ತು ಕಲಂ 45 ಭಾರತೀಯ ಸಾಕ್ಷಿ ಅಧಿ ನಿಯಮದಡಿ ಅರ್ಜಿಯನ್ನು ಸಲ್ಲಿಸಿ ಪಿ ಡಬ್ಲೂ.1 ರವರು ಒಪ್ಪಿರುವಂತಹ ನಿಪಿ.2 ರ ಸಹಿಯನ್ನು ವಿವಾದಿತ ಸಹಿ ಇರುವಂತಹ ನಿಡಿ.3 ರಿಂದ 5 ರೊಂದಿಗೆ ತುಲನೆ ಮಾಡುವ ಸಲುವಾಗಿ ವೈಜ್ಞಾನಿಕ ಪರಿಶೀಲನೆಗೆ ಕೈ ಬರಹ ತಜ್ಞರಿಗೆ ಕಳುಹಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

2. ವಾದಿಯರು ತಮ್ಮ ತಕರಾರನ್ನು ಸಲ್ಲಿಸಿದ್ದು ತಕರಾರಿನ ಸಾರಾಂಶ ಈ ಕೆಳಗಿನಂತೆ ಇರುತ್ತದೆ.

ಬಿ ಪಿ ಶಿವಣ್ಣ ಇವರು ತಮ್ಮ ಪ್ರತಿವಾದ ಪತ್ರದಲ್ಲಿ ಪಾರ್ತಲಿಂಗಯ್ಯ ಇವರು ಯಾವುದೇ ದಾಖಲಾತಿಯನ್ನಾಗಲೀ ಕರಾರು ಪತ್ರವನ್ನಾಗಲೀ 2 ರಿಂದ 4 ನೇ ಪ್ರತಿವಾದಿಯವರಿಗೆ ಬರೆದು ಕೊಟ್ಟಿಲ್ಲವೆಂದು ಮತ್ತು ಅವರ ಸಹೋದರ ಶಂಭುಲಿಂಗಪ್ಪ ಮತ್ತು ಪಾತಯ್ಯ ಇವರು 2 ಮತ್ತು 4 ನೇ ಪ್ರತಿವಾದಿಯವರಿಗೆ ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲವೆಂದು, 2 ರಿಂದ 4 ನೇ ಪ್ರತಿವಾದಿಯವರು ಮಿಲಾಪಿಯಾಗಿ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಶಂಭುಲಿಂಗಪ್ಪ ಮತ್ತು ಪಾರ್ತಯ್ಯ ಇವರ ಹೆಸರಿಗೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತಾರೆಂದು ಖಂಡನೆ ತೆಗೆದುಕೊಂಡಿರುತ್ತಾರೆ. ಇಂತಹ ಸಂದರ್ಭದಲ್ಲಿ ಬಿಪಿ ಶಿವಣ್ಣ ಇವರ ನಿಡಿ.3 ರಿಂದ 5 ದಾಖಲಾತಿಗಳಲ್ಲಿರುವ ಸಹಿಯನ್ನು ನಿಪಿ.2 ರ ಸಹಿಯೊಂದಿಗೆ ತುಲನೆ ಮಾಡುವ ಸಲುವಾಗಿ ಮತ್ತು ವರದಿಯನ್ನು ತರಿಸಿಕೊಳ್ಳುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ.

ಎಂ ಸಿ . ಪಾತಯ್ಯ, ಶಂಭುಲಿಂಗಪ್ಪ , ಬಿ ಪಿ ಶಿವಣ್ಣ ಮತ್ತು ರಂಗಸ್ವಾಮಿ ಬಿ ಪಿ ಇವರು ಈಗಾಗಲೇ ತೀರಿಕೊಂಡಿದ್ದು, ಪ್ರತಿವಾದಿಯವರ ಸಾಕ್ಷ್ಯವನ್ನು ಗಮನಿಸಿದಾಗ ಎಂ ಸಿ. ಪಾತಯ್ಯ, ಶಂಭುಲಿಂಗಪ್ಪ , ಬಿ ಪಿ ಶಿವಣ್ಣ ಮತ್ತು ರಂಗಸ್ವಾಮಿ ಬಿ ಪಿ ಯಾವುದೇ ಕರಾರು ಪತ್ರವನ್ನು 2 ರಿಂದ 4 ನೇ ಪ್ರತಿವಾದಿಯವರಿಗೆ ಬರೆದು ಕೊಟ್ಟಿಲ್ಲವೆಂದು ಕಂಡು ಬಂದಿದ್ದು, ಹೀಗಿದ್ದರೂ ಕೂಡ ಕೇವಲ ದಾವೆಯನ್ನು ಮುಂದೂಡುವ ಸಲುವಾಗಿ ಪ್ರತಿವಾದಿಯವರು ಈ ಅರ್ಜಿಯನ್ನು ಸಲ್ಲಿಸಿದ್ದು, ಕರಾರು ಪತ್ರವು ಕಾಲಪರಿಮಿತಿ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಬಿ ಪಿ ಶಿವಣ್ಣ ಇವರ ಸಹಿಯನ್ನು ಕೈ

ಬರಹ ತಜ್ಞರಿಗೆ ಕಳುಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಮತ್ತು ಅವಶ್ಯಕವಾಗಿರುವುದಿಲ್ಲ . 2 ರಿಂದ 4 ನೇ ಪ್ರತಿವಾದಿಯವರು ಯಾವುದೇ ಎದುರು ಕ್ಲೈಮನ್ನು ಕೇಳಿರುವುದಿಲ್ಲ . ಆದ್ದರಿಂದ ಒಂದು ವೇಳೆ ಅರ್ಜಿಯನ್ನು ತಿರಸ್ಕರಿಸಿದಲ್ಲಿ ಪ್ರತಿವಾದಿಯವರಿಗೆ ಯಾವುದೇ ರೀತಿ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ–

1. ಅರ್ಜಿದಾರರು / *2* ರಿಂದ *4* ನೇ ಪ್ರತಿವಾದಿಯರು ಕೋರಿದಂತೆ ಪಿ ಡಬ್ಲೂ.*1* ರವರು ಒಪ್ಪಿರುವಂತಹ ನಿಪಿ.*2* ರಲ್ಲಿರುವಂತಹ ಬಿ ಪಿ ಶಿವಣ್ಣ ಮತ್ತು ಬಿ ಟಿ ರಂಗಸ್ವಾಮಿ ರವರ ಸಹಿಯನ್ನು ವಿವಾದಿತ ಸಹಿ ಇರುವಂತಹ ನಿಡಿ.*4* ರಲ್ಲಿರುವ ಸಹಿಯೊಂದಿಗೆ ತುಲನೆ ಮಾಡುವ ಸಲುವಾಗಿ ವೈಜ್ಞಾನಿಕ ಪರಿಶೀಲನೆಗೆ ಕಳುಹಿಸುವಂತಹ ಅವಶ್ಯಕತೆ ಇದೆ ಎಂದು ಸಕಾರಣ ನೀಡಿರುತ್ತಾರೆಯೇ*?*
2. ಅರ್ಜಿದಾರರು / *2* ರಿಂದ *4* ನೇ ಪ್ರತಿವಾದಿಯರು ಕೋರಿದಂತೆ ಮುಂದುವರೆದು ಪಿ ಡಬ್ಲೂ.*1* ರವರು ಒಪ್ಪಿರುವಂತಹ ನಿಪಿ.*2* ರಲ್ಲಿರುವ ಎಂ ಸಿ ಪಾತಯ್ಯ ರವರ ಸಹಿಯನ್ನು ವಿವಾದಿತ ಸಹಿ ಇರುವಂತಹ ನಿಡಿ.*3* ಮತ್ತು *5* ರಲ್ಲಿರುವ ಸಹಿಯೊಂದಿಗೆ ತುಲನೆ ಮಾಡುವ ಸಲುವಾಗಿ ವೈಜ್ಞಾನಿಕ ಪರಿಶೀಲನೆಗೆ ಕಳುಹಿಸುವಂತಹ ಅವಶ್ಯಕತೆ ಇದೆ ಎಂದು ಸಕಾರಣ ನೀಡಿರುತ್ತಾರೆಯೇ*?*
3. ಯಾವ ಆದೇಶ*?*

4. ನ್ಯಾಯಾಲಯದ ಮುಂದಿರುವ ದಾಖಾಲಾತಿಗಳನ್ನು ಮತ್ತು ಕಡತವನ್ನು ಗಮನಿಸಿ, ವಾದವನ್ನು ಆಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆಃ–

ಅಂಶ-1 ಮತ್ತು 2ಃ ಸಕಾರಾತ್ಮಕವಾಗಿಃ
ಅಂಶ-3 ಃ ಈ ಕೆಳಕಂಡ ಕಾರಣಗಳಿಗಾಗಿ
ಅಂತಿಮ ಆದೇಶದಂತೆ.

## ಕಾ ರ ಣ ಗ ಳು

5. **ಅಂಶ-1ಃ** ವಾದಿಯು ಈ ದಾವೆಯನ್ನು ಘೋಷಣಾತ್ಮಕ ಮತ್ತು ದಾವಾ ಸ್ವಾಧೀನತೆಯನ್ನು ಕೋರಿ ಸಲ್ಲಿಸಿದ್ದು, ಪ್ರತಿವಾದಿ 2 ರಿಂದ 4 ನೇ ಪರವಾಗಿ ಅವರ ಅಧಿಕಾರ ಪತ್ರವನ್ನು ಹೊಂದಿರುವ ಅರ್ಜಿದಾರ ಬಿ ಎಂ ಗಂಗಾಧರ್ ಇವರು ಪ್ರಮಾಣ ಪತ್ರ ಸಲ್ಲಿಸಿದ್ದು ಪ್ರಮಾಣ ಪತ್ರದಲ್ಲಿ 2 ಮತ್ತು 3 ನೇ ಪ್ರತಿವಾದಿಯವರು ದಿನಾಂಕಃ02.07.1979 ರಿಂದ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಶಂಭುಲಿಂಗಪ್ಪ ಮತ್ತು ಎಂ ಸಿ ಪಾತಯ್ಯ ಇವರು ಕರಾರು ಪತ್ರ ಬರೆದುಕೊಟ್ಟ ದಿನಾಂಕದಿಂದ ಸ್ವಾಧೀನದಲ್ಲಿದ್ದು 4 ನೇ ಪ್ರತಿವಾದಿಯು ದಿನಾಂಕ 26.09.1979 ರಂತೆ ಎಂ ಸಿ ಪಾತಯ್ಯ ಮತ್ತು ಶಂಭುಲಿಂಗಪ್ಪ ಬರೆದುಕೊಟ್ಟಂತಹ ಕರಾರು ಪತ್ರದಂತೆ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ತದನಂತರ 1 ನೇ ಪ್ರತಿವಾದಿಯು ದಿನಾಂಕ 15.11.1985 ರಂದು 4 ನೇ ಪ್ರತಿವಾದಿಗೆ ಕರಾರು ಪತ್ರ ಬರೆದುಕೊಟ್ಟು ಸಂಪೂರ್ಣವಾದ ಪ್ರತಿಫಲ ಹಣವನ್ನು ಪಡೆದುಕೊಂಡಿರುತ್ತಾರೆ ಹಾಗೂ ದಾವಾ ಎ ಶೆಡ್ಯೂಲ್ ಆಸ್ತಿಯ ಸ್ವಾಧೀನವನ್ನು 2 ಮತ್ತು 4 ನೇ ಪ್ರತಿವಾದಿಗೆ ನೀಡಿದ್ದು, ಅದರಂತೆ ಪ್ರತಿವಾದಿ 2 ರಿಂದ 4 ರವರು ದಾವಾ ಎ ಶೆಡ್ಯೂಲ್ ಆಸ್ತಿಯ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆಂದು, 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಮತ್ತು ಎಂ ಸಿ ಪಾತಯ್ಯ ಇವರು ಕರಾರು ಪತ್ರ ಬರೆದು ಕೊಟ್ಟಿದ್ದರೂ ಕೂಡ ಪಿ ಡಬ್ಲ್ಯೂ1 ರವರು ಪಾಟೀ ಸವಾಲಿನಲ್ಲಿ ಅವರ ತಂದೆ ಬಿ ಪಿ ಶಿವಣ್ಣ ಮತ್ತು ಬಿ ಪಿ ರಂಗಸ್ವಾಮಿ ಇವರ ಸಹಿಯನ್ನು ನಿಡಿ.4

ರಲ್ಲಿ ಅಲ್ಲಗಳೆದಿದ್ದು ಮತ್ತು ದಿನಾಂಕ 02.09.1979 ರ ಕರಾರು ಪತ್ರವನ್ನು ಕೂಡ ಅಲ್ಲಗಳೆದಿದ್ದು, ಅಲ್ಲದೆ ನಿಡಿ. 3 ಮತ್ತು 5 ರ ದಾಖಲಾತಿಯನ್ನು ಕೂಡ ಅಲ್ಲಗಳೆದಿರುತ್ತಾರೆ. ಪಿ ಡಬ್ಲ್ಯೂ.1 ರವರು ನಿಪಿ.2 ರಲ್ಲಿರುವ ಸಹಿಯನ್ನು ಒಪ್ಪಿಕೊಂಡಿರುತ್ತಾರೆ.

6. ಪ್ರತಿವಾದಿಯವರು ಕರಾರು ಪತ್ರದಲ್ಲಿರುವಂತಹ ಸಹಿಯನ್ನು ಅಲ್ಲಗಳೆದಿರುತ್ತಾರೆ ವಾದಿಯು ತಾನು ಮತ್ತು 1 ನೇ ಪ್ರತಿವಾದಿಯು ದಾವಾ ಆಸ್ತಿಗೆ ಮಾಲೀಕರೆಂದು ಘೋಷಣೆ ಮಾಡಬೇಕೆಂದು ಕೋರಿಕೊಂಡಿದ್ದು 2 ರಿಂದ 4 ನೇ ಪ್ರತಿವಾದಿಯವರು ತಾವು ದಾವಾ ಆಸ್ತಿಯಲ್ಲಿ 30 ವರ್ಷಗಳಿಂದ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆಂದು ಮತ್ತು ಅವರಿಗೆ ಪಾತಯ್ಯ, ಬಿ ಪಿ ಶಿವಣ್ಣ ಇವರು ಬರೆದುಕೊಟ್ಟ ಕರಾರು ಪತ್ರದ ಆಧಾರದ ಮೇಲೆ ಅವರು ಸ್ವಾಧೀನ ಹೊಂದಿ ಅಧಿಕಾರ ಹೊಂದಿರುತ್ತಾರೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ ಈ ನ್ಯಾಯಾಲಯವು ಈ ಅಂಶದ ಬಗ್ಗೆ ವಿವಾದಾಂಶವನ್ನು ರಚಿಸಿದ್ದು ಈ ವಿವಾದಾಂಶವನ್ನು ಪುರಾವೆಗೊಳಿಸುವಂತಹ ಭಾರ ಪ್ರತಿವಾದಿಯವರ ಹೆಗಲ ಮೇಲೆ ಇರುತ್ತದೆ. ಪಿ ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2 ರಿಂದ 4 ನೇ ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶದಾರರಾಗಿರುತ್ತಾರೆಂದು ಸಾಕ್ಷ್ಯನುಡಿದಿರುತ್ತಾರೆ ಮತ್ತು ಪಾಟೀ ಸವಾಲಿನಲ್ಲಿ ನಿಡಿ.3 ರಿಂದ 5 ರ ದಾಖಲಾತಿಗಳನ್ನು ಒಪ್ಪಿಕೊಂಡಿರುವುದಿಲ್ಲ.

7. ಆದ್ದರಿಂದ ಪ್ರತಿವಾದಿಯರು ಕೋರಿದಂತೆ ವಾದಿ ಒಪ್ಪಿರುವಂತಹ ನಿಪಿ.2 ರ ಸಹಿಯನ್ನು ವಿವಾದಿತ ಸಹಿ ಇರುವಂತಹ ನಿಡಿ.3 ರಿಂದ 5 ರೊಂದಿಗೆ ತುಲನೆ ಮಾಡುವ ಸಲುವಾಗಿ ವೈಜ್ಞಾನಿಕ ಪರಿಶೀಲನೆಗೆ ಕೈ ಬರಹ ತಜ್ಞರಿಗೆ ಕಳುಹಿಸಿಕೊಡುವುದು ಸೂಕ್ತ ಎಂದು ಕಂಡುಬರುತ್ತದೆ ಆದ್ದರಿಂದ ಅಂಶ – 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

8. **ಅಂಶ-2-** ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**ಆದೇಶ**

ಅರ್ಜಿದಾರರು / ಪ್ರತಿವಾದಿ 2 ರಿಂದ 4 ರವರು ಮಧ್ಯಂತರ ಅರ್ಜಿ-27 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 10 ಎ ರ ಡಿಯಲ್ಲಿ ಸಲ್ಲಿಸಿದಂತಹ ಅರ್ಜಿಯನ್ನು ಪುರಸ್ಕರಿಸಲಾಗಿದೆ .

ಅರ್ಜಿದಾರರು / *2* ರಿಂದ *4* ನೇ ಪ್ರತಿವಾದಿಯರು ಕೋರಿದಂತೆ ಪಿ ಡಬ್ಲೂ. *1* ರವರು ಒಪ್ಪಿರುವಂತಹ ನಿಪಿ. *2* ರಲ್ಲಿರುವಂತಹ ಬಿ ಪಿ ಶಿವಣ್ಣ ಮತ್ತು ಬಿ ಟಿ ರಂಗಸ್ವಾಮಿ ರವರ ಸಹಿಯನ್ನು ವಿವಾದಿತ ಸಹಿ ಇರುವಂತಹ ನಿಡಿ. *4* ರಲ್ಲಿರುವ ಸಹಿಯೊಂದಿಗೆ ಮತ್ತು ಪಿ ಡಬ್ಲೂ. *1* ರವರು ಒಪ್ಪಿರುವಂತಹ ನಿಪಿ. *2* ರಲ್ಲಿರುವ ಎಂ ಸಿ ಪಾತಯ್ಯ ರವರ ಸಹಿಯನ್ನು ವಿವಾದಿತ ಸಹಿ ಇರುವಂತಹ ನಿಡಿ. *3* ಮತ್ತು *5* ರಲ್ಲಿರುವ ಸಹಿಯೊಂದಿಗೆ ತುಲನೆ ಮಾಡುವ ಸಲುವಾಗಿ ವೈಜ್ಞಾನಿಕ ಪರಿಶೀಲನೆಗೆ ಕೈ ಬರಹ ತಜ್ಞರಿಗೆ ಕಳುಹಿಸಿಕೊಡಲು ಆದೇಶಿಸಲಾಗಿದೆ.

ವೈಜ್ಞಾನಿಕ ಪರಿಶೀಲನೆಗೆ ತಗಲುವ ಸಂಪೂರ್ಣ ಖರ್ಚನ್ನು ಅರ್ಜಿದಾರರೇ ಭರಿಸತಕ್ಕದ್ದು.

ರೂ.3,000/-ಗಳನ್ನು ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ.

ದಾಖಲಾತಿಗಳನ್ನು ಕಳುಹಿಸುವ ಪೂರ್ವದಲ್ಲಿ ಅದರ ದೃಡೀಕೃತ ನಕಲುಗಳನ್ನು ಕಡತದಲ್ಲಿ ಇರಿಸಿಕೊಳ್ಳ ತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 30 ನೇ ಆಗಸ್ಟ್-2024 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.